ದಿನಾಂಕ 13-07-2022 ಅಸಲು ದಾವಾ ಸಂ.30/2010
ಪಿ.ಡಬ್ಲ್ಯೂ-1

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

**ಪಾಟೀ ಸವಾಲು : ಪ್ರತಿವಾದಿ ನಂ.1 ರವರ ಪರ ಶ್ರೀ.ಎ ವ್ಹಿ ಬಿ ವಕೀಲರಿಂದಃ-**

ನಾನು ಶಾಲೆ ಕಲಿತಿಲ್ಲ. ನನಗೆ ಸಹಿ ಮಾಡಲು ಮಾತ್ರ ಬರುತ್ತದೆ. ನಾನು ಈ ದಾವೆಯನ್ನು ಸತ್ಯಬಾಮಾ ಬಂಡಿವಡ್ಡರ ಇವರ ಒಬ್ಬರ ಮೇಲೆ ಮಾತ್ರ ದಾಖಲಿಸಿದ್ದೇನೆ. 2 ನೇ ಪ್ರತಿವಾದಿಯ ಪರಿಚಯವಿದೆ. ನಾನು 2 ರಿಂದ 7 ನೇ ಪ್ರತಿವಾದಿಯರ ಮೇಲೆ ದಾವೆ ದಾಖಲಿಸಿಲ್ಲ. ನಾನು 2 ರಿಂದ 7 ನೇ ಪ್ರತಿವಾದಿಯರ ಮೇಲೆ ಈ ದಾವೆ ದಾಖಲಿಸಿದ್ದು, ಅವರಲ್ಲಿ 6 ನೇ ಪ್ರತಿವಾದಿ ವಯಸ್ಕರಾಗಿದ್ದು, ದಾವಾ ಪತ್ರವನ್ನು ತಿದ್ದುಪಡಿ ಮಾಡದೇ ಹಾಗೆಯೇ ಮುಂದುವರೆಸಿಕೊಂಡು ಹೋಗುತ್ತಿದ್ದೇನೆಂದರೆ ನಾನು ಅವರ ಮೇಲೆ ದಾವೆ ದಾಖಲಿಸಿಲ್ಲ.

ಕಲ್ಲಪ್ಪ ಹನುಮಂತ ಗೋಪಾಳಿ ಇವರು ನನ್ನ ತಂದೆ. ನನ್ನ ತಂದೆ ಮತ್ತು 2 ನೇ ಪ್ರತಿವಾದಿ ಮೇಲೆ 1 ನೇ ಪ್ರತಿವಾದಿ ಓ. ಎಸ್.ನಂ.64/2007 ದಾಖಲಿಸಿರುವ ವಿಷಯ ನನಗೆ ಗೊತ್ತಿಲ್ಲ. ನಾನು ಮತ್ತು ನನ್ನ ತಂದೆ ಬೇರೆ ಬೇರೆ ವಾಸವಿದ್ದೇವೆ. ನನ್ನ ತಂದೆ ಇದ್ದಾರೆ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ಹೇಳಬಹುದು. ಸದರಿ ಅಸಲು ದಾವಾದಲ್ಲಿ 1 ನೇ ಪ್ರತಿವಾದಿಗೆ 2 ನೇ ಪ್ರತಿವಾದಿ ದಿನಾಂಕ 02-12-2004 ರಿಂದ 31-01-2009 ರವರೆಗೆ ರೂ.15,000/- ಗಳಿಗೆ ತೆಗೆದುಕೊಂಡು, ಉಂಡು ನಂತರ 2 ನೇ ಪ್ರತಿವಾದಿಗೆ ಬಿಟ್ಟುಕೊಡಬೇಕಾಗಿತ್ತು ಎಂಬ ವಿಷಯ ನನಗೆ ಗೊತ್ತು. ನನ್ನ ತಂದೆ ದಿನಾಂಕ 03-04-2007 ರಂದು ದಾವಾ ಆಸ್ತಿ ಖರೀದಿ ಕರಾರು ಪತ್ರ ಮಾಡಿಕೊಂಡ ವಿಷಯ ನನಗೆ ಗೊತ್ತಿಲ್ಲ. ನಾನು ದಾವಾ ಆಸ್ತಿಯನ್ನು 2007 ರಲ್ಲಿ ಖರೀದಿಗೆ ತೆಗೆದುಕೊಂಡಿದ್ದೇನೆ. ಆಗ ನಾನು ದಾವಾ ಆಸ್ತಿಗೆ ಸಂಬಂಧಿಸಿದ ಇ.ಸಿ. ಮತ್ತು ಇತರೆ ದಾಖಲಾತಿಗಳನ್ನು ತೆಗೆಸಿ ನೋಡಿರುತ್ತೇನೆ. ನಾನು 2007 ನೇ ಇಸ್ವಿಯಲ್ಲಿ ಆಸ್ತಿ ದಾಖಲಾತಿಗಳನ್ನು ನೋಡಿದ್ದೇನೆಂದು ತೋರಿಸಲು ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ನಾನು ಮತ್ತು ನನ್ನ ತಂದೆ ಇಬ್ಬರೂ ಒಟ್ಟಿಗೆ ವಾಸವಿದ್ದೇವೆ, ಬೇರೆ ಬೇರೆ ಇದ್ದೇವೆಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಓ ಎಸ್ ನಂ.64/2007 ರಲ್ಲಿ 1 ನೇ ಪ್ರತಿವಾದಿಯ ಕಬ್ಜಾಗೆ ಹರಕತ್ ಮಾಡಬಾರದೆಂದು ಆದೇಶವಾಗಿರುತ್ತದೆ ಎಂದರೆ 1 ನೇ ಪ್ರತಿವಾದಿ 5 ವರ್ಷಗಳ ಕಾಲ ಊಟ ಮಾಡಿ ನಂತರ ಬಿಟ್ಟುಕೊಡಬೇಕು ಎಂದು ಆದೇಶವಾಗಿರುತ್ತದೆ. ಸದರಿ ವಿಷಯ ನನಗೆ 2 ನೇ ಪ್ರತಿವಾದಿ ನನಗೆ ಆಸ್ತಿ ಖರೀದಿ ಕೊಡುವ

ಸಮಯದಲ್ಲಿ ಗೊತ್ತಾಯಿತು. ನ್ಯಾಯಾಲಯದ ಆದೇಶವಿದ್ದರೂ ಸಹ ನಾನು 2 ನೇ ಪ್ರತಿವಾದಿಗೆ ಯಾವುದೇ ಹಣ ನೀಡದೇ ಖೊಟ್ಟಿ ಖರೀದಿ ಪತ್ರವನ್ನು ಸೃಷ್ಟಿ ಮಾಡಿ ಖೊಟ್ಟಿ ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ನಿಪಿ-2 ರಂತೆ 6 ನೇ ಪ್ರತಿವಾದಿ ಅಪ್ರಾಪ್ತನಿದ್ದು ಆತನ ಹೆಸರಿಗೆ ಜಮೀನು ಖರೀದಿ ಮಾಡಬೇಕೆಂದರೆ ಆತನ ಹೆಸರಿನಲ್ಲಿ ನಾವು ಯಾವುದೇ ಹಣ ಡೆಪಾಸಿಟ್ ಮಾಡಿಲ್ಲ ಮತ್ತು ಎ.ಸಿ.ಯವರಿಂದ ಯಾವುದೇ ಪರವಾನಿಗೆ ಪಡೆದಿಲ್ಲ. ನಿಪಿ-2 ರಲ್ಲಿ ಕಬ್ಜಾ ಕೊಟ್ಟಿರುತ್ತೇವೆಂದು ಬರೆದಿರುವ ವಿಷಯ ಸರಿ ಇದೆ, ಆದರೆ 5 ವರ್ಷಗಳ ಕಾಲ ಊಟ ಮಾಡಿ ಬಿಡಬೇಕೆಂದು ಕರಾರು ಆಗಿರುತ್ತದೆ. 1 ನೇ ಪ್ರತಿವಾದಿ 5 ವರ್ಷಗಳ ಕಾಲ ಊಟ ಮಾಡಿ 2 ನೇ ಪ್ರತಿವಾದಿಗೆ ದಾವಾ ಆಸ್ತಿಯನ್ನು ಬಿಡಬೇಕೆಂದು ನನ್ನ ಖರೀದಿ ಕರಾರು ಪತ್ರದಲ್ಲಿಬರೆದಿಲ್ಲ ಎಂದರೆ ಸರಿ. ಅಸಲು ದಾವಾ ನಂ.64/2007 ರಲ್ಲಿ ಆದ ಆದೇಶದ ವಿರುದ್ಧ 2 ನೇ ಪ್ರತಿವಾದಿ ಅಪೀಲು ಮಾಡಿರುವ ವಿಚಾರ ನನಗೆ ಗೊತ್ತಿಲ್ಲ.

2 ನೇ ಪ್ರತಿವಾದಿ 2009 ರಲ್ಲಿ 1 ನೇ ಪ್ರತಿವಾದಿಯ ಕಬ್ಜಾ ಬಿಡಿಸಬೇಕೆಂದು ದಾವೆ ದಾಖಲಿಸಿರುವ ವಿಷಯ ನನಗೆ ಗೊತ್ತು. ಅದರಲ್ಲಿ 1 ನೇ ಪ್ರತಿವಾದಿ ಹಾಜರಾಗಿ 2 ನೇ ಪ್ರತಿವಾದಿ ದಾವಾ ಆಸ್ತಿಯ ಮಾಲೀಕನಲ್ಲ ಎಂದು ತಕರಾರು ಹಾಕಿರುವ ವಿಷಯ ನನಗೆ ನೆನಪಿಲ್ಲ. ಆ ಕೇಸನಲ್ಲಿ ಆಸ್ತಿಯ ಮಾಲೀಕ ನಾನಿದ್ದು, ನನ್ನನ್ನು ವಾದಿಯನ್ನಾಗಿ ಸೇರಿಸಬೇಕೆಂದು ನಾನು ಅರ್ಜಿ ಸಲ್ಲಿಸಿರುವ ವಿಚಾರ ನನಗೆ ಗೊತ್ತು. ಸದರಿ ಅರ್ಜಿಯ ಮೇಲೆ ಆದ ಆದೇಶವನ್ನು ನನ್ನ ವಕೀಲರ ಮುಖಾಂತರ ತಿಳಿದುಕೊಂಡಿಲ್ಲ.

ಮುಂದುವರೆದ ಪಾಟೀಸವಾಲಿಗೆ ವಕೀಲರು ಸಮಯಾವಕಾಶ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ನಿರ್ದೇಶನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ.ಕೇ.ಸರಿ ಅದೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂ., ಬನಹಟ್ಟಿ.